4) ಶಾಸನ ರಚನೆ :-

ಅ) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2007

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :- ಮಾನ್ಯ ಛೇರ್ಮನ್‌ರವರೆ, 2007ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಛೇರ್ಮನ್‌ರವರೆ, ನನ್ನದೊಂದು ತಕರಾರು ಇದೆ. Law Minister ರವರಾದ ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರೆ, ತಾವೊಂದು ತಿದ್ದುಪಡಿ ಕಳುಹಿಸಿದ್ದೀರಿ. ಕಂದಾಯ ಸಚಿವರು ಸಹ ತಿದ್ದುಪಡಿ ಮಾಡಿ bill ನಲ್ಲಿಯೇ ತಂದಿದ್ದಾರೆ. ಈ bill ಅನ್ನು ಮಂಡನೆ ಮಾಡುವ ಮೊದಲೇ ಇದಕ್ಕೆ explain ಮಾಡಬೇಕು. ಈಗ bill ಅನ್ನೇ change ಮಾಡಿ ತಂದಾಗ ತಿದ್ದುಪಡಿ ಅಗತ್ಯವಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಈಗ ತಂದಿರುವ ವಿಧೇಯಕಕ್ಕೆ ನನ್ನ ಸರದಿ ಬಂದಾಗ ಹೇಗೆ ಬದಲಾವಣೆ ಇದೆಯೆಂದು ನಾನು ಹೇಳುತ್ತೇನೆ. ಈಗ ಕಂದಾಯ ಸಚಿವರು ತಂದಿರತಕ್ಕ ಭೂಕಬಳಿಕೆ bill ಕಂದಾಯ ಇಲಾಖೆಗೆ ಸೇರಿರತಕ್ಕಂಥ ಭೂ ಕಬಳಿಕೆಗೆ ಮಾತ್ರ ಸೀಮಿತವಾಗಿರತಕ್ಕಂಥದ್ದು. ಆದರೆ, ಈಗ ನಾವಿಲ್ಲಿ ತಮ್ಮ ವಿವೇಚನೆಗೆ ಮತ್ತು ಚರ್ಚೆಗೆ ಅವಕಾಶ ಮಾಡತಕ್ಕಂಥ ವಿಧೇಯಕದಲ್ಲಿ ಯಾವುದೇ ಕೊಳಚೆ ಪ್ರದೇಶಗಳಲ್ಲಿ, ಮಂಡಳಿಗಳಲ್ಲಿರತಕ್ಕಂಥ ಭೂ ಕಬಳಿಕೆ ಆಗಿರಬಹುದು, ಅಥವಾ ಧಾರ್ಮಿಕ ದತ್ತಿ ಇಲಾಖೆಗೆ ಸಂಬಂಧಪಟ್ಟ ಭೂಮಿ ಆಗಿರಬಹುದು, ಅಂದರೆ beyond the Revenue Department any other land grabbing belonging to any other Department ಸರ್ಕಾರಿ ಭೂಮಿ ಯಾವುದೇ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥದ್ದರಲ್ಲಿ ಯಾರ್ಯಾರು ಭೂಕಬಳಿಕೆಯನ್ನು ಮಾಡಿರುತ್ತಾರೆ, ಆ ಭೂ ಕಬಳಿಕೆಗೆ ಸಂಬಂಧಪಟ್ಟಂಥ ವಿಧೇಯಕವನ್ನು ಇಲ್ಲಿ ನಾನು ತರುತ್ತಿದ್ದೇನೆ. ಈಗ ತರತಕ್ಕಂಥ ವಿಧೇಯಕದಲ್ಲಿ ನಿನ್ನೆ ಚರ್ಚೆಯಾಗಿ ಮಾನ್ಯ ಎಲ್ಲ ಹಿರಿಯರು ಕೊಟ್ಟಿರತಕ್ಕಂಥ ಸಲಹೆ ಮೇರೆಗೆ ನಾನು 94(ಎ), 94(ಬಿ), 94(ಸಿ) ಇವೆಲ್ಲ amendment ಅನ್ನು ಸಹ ತಂದಿದ್ದೇವೆ. ಅದೇ ರೀತಿ ಕೊಡಗಿಗೆ ಸಂಬಂಧಪಟ್ಟಂತೆ ಅಲ್ಲಿ ಪಾಣೆ, ಬಾಣೆ, ಜಮ್ಮಾ ಇವೆಲ್ಲವುಗಳಿಗೆ ಸಂಬಂಧಪಟ್ಟದ್ದು ಈಗಾಗಲೇ Section 53ರ ಕೆಳಗಡೆ ವಿಚಾರಣೆಯಲ್ಲಿರತಕ್ಕಂಥ, ತಿರಸ್ಕೃತವಾದಂಥ ಎಲ್ಲಾ ಅರ್ಜಿಗಳಿಗೆ ಸಂಬಂಧಪಟ್ಟದ್ದು ಕೂಡ ಇದಕ್ಕೆ ಹೊರತಾಗಿರುತ್ತದೆ. ಅವೆಲ್ಲವನ್ನು ಬಿಟ್ಟು

ಬೇರೆ ತರಹದ ಕಾನೂನು ಅದಕ್ಕೆ ಸಂಬಂಧಪಡುವಂಥದ್ದು. ಆ ವಿಚಾರದಲ್ಲಿ ತಮ್ಮ ವಿವೇಚನೆಗೆ ಬಿಡುತ್ತೇವೆ. ಆ ಕಾನೂನು ಅನ್ನು ಇಲ್ಲಿ ತಂದಿದ್ದೇವೆ.

ಛೇರ್ಮನ್ :– ಪ್ರಸ್ತಾವ ಏನೆಂದರೆ;

"2007ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಮಂತ್ರಿಗಳು) :– ಮಾನ್ಯ ಛೇರ್ಮನ್‌ರವರೆ, 2007ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಛೇರ್ಮನ್ :– ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ – 2)

ಆ) ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕ, 2007

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಛೇರ್ಮನ್‌ರವರೆ, 2007ರ ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಛೇರ್ಮನ್ :– ಪ್ರಸ್ತಾವ ಏನೆಂದರೆ,

"2007ರ ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಛೇರ್ಮನ್‌ರವರೆ, 2007ರ ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಛೇರ್ಮನ್ :– ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ – 3)